# Government of Karnataka
# Deposition Sheet (R.P.N.57) Form 4 Criminal
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 33/2021 |

ದಿನಾಂಕ 16-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ9 ಪ್ರಾಸಾಃ7

| | |
|---|---|
| ಹೆಸರು | ರಂಗಯ್ಯ. ಕೆ. |
| ತಂದೆಯ ಹೆಸರು | ಯಮನಪ್ಪ |
| ವಯಸ್ಸು | 46 ವರ್ಷ |
| ಉದ್ಯೋಗ | ಪಿ ಎಸ್ ಐ ಮಸ್ಕಿ ಪೋಲಿಸ್ ಠಾಣೆ |
| ವಾಸಸ್ಥಳ | ಮಸ್ಕಿ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ**

ನಾನು 27-05-2020 ರಿಂದ 12-02-2021 ರವರೆಗೆ ದೇವದುರ್ಗ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 25-08-2020 ರಂದು ಮದ್ಯಹ್ನಾ 2-00 ರಿಂದ ರಾತ್ರಿ 9-00 ಗಂಟೆಯವರೆಗೆ ನಾನು ಠಾಣೆ ಕರ್ತವ್ಯದಲ್ಲಿದ್ದಾಗ, ರಾತ್ರಿ 8-15 ಗಂಟೆ ಸುಮಾರಿಗೆ ಚಾಸಾ-1 ತಹಶೀಲ್ದಾರರವರು ಠಾಣೆಗೆ ಹಾಜರಾಗಿ ಲಿಖಿತ ಗಣಕೀಕೃತ ದೂರನ್ನು ಹಾಜರು ಪಡಿಸಿದ್ದು ಸದರಿ ದೂರನ್ನು ಪಡೆದುಕೊಂಡು, ನಾನು ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂಬರ್ 142/2020 ರಂತೆ ಭಾರತೀಯ ದಂಡ ಸಂಹಿತೆಯ ಕಲಂ 353, 186, 269, 270 ಸಹವಾಚಕ ಕಲಂ 34 ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಅದರ ಪ್ರತಿಯನ್ನು ರವಾನಿಸಿರುತ್ತೇನೆ. ಸಾಕ್ಷಿ ಎಫ್ ಐ ಆರ್ ನೋಡಿ ಗುರುತಿಸಿದ್ದು ಅದನ್ನು ನಿ ಪಿ 3 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ ಪಿ 3 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 2 ಎಂದು ಗುರುತಿಸಲಾಗಿದೆ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಅದೆ ದಿನಾಂಕದಂದು ಚಾಸಾ-5 ರವರು ವಶಪಡಿಸಿಕೊಂಡಿದ್ದ ಎರಡು ದೊಡ್ಡ ಸ್ಪೀಕರ್ ಬಾಕ್ಸ್‌ಗಳನ್ನು ನ್ಯಾಯಾಲಯಕ್ಕೆ ಜಮಾ ಮಾಡಲು ಅನುಮತಿ ಕೋರಿದ್ದು, ಸ್ವತ್ತಿನ ಪಟ್ಟಿ ನೋಡಿ ಸಾಕ್ಷಿದಾರರು ಗುರುತಿಸಿದ್ದು ಅದನ್ನು ನಿ ಪಿ 4 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು.

ದಿನಾಂಕ: 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ಗಂಟೆಯವರೆಗೆ ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು 3 ಇವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದ್ದು ಈಗಾಗಲೇ ನಿ ಪಿ 1 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 1(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಫಿರ್ಯಾದಿದಾರರ ಮತ್ತು ಸಾಕ್ಷಿದಾರರಾದ 4

ರಿಂದ 8 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ: 19-11-2020 ರಂದು ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ ರಾಯಚೂರು ಇವರಿಂದ ಚಾಸಾ-1 ರವರ ಕರ್ತವ್ಯ ಪ್ರಮಾಣ ಪತ್ರ ಮತ್ತು 02 ಅಧಿಕೃತ ಜ್ಞಾಪಾನ ಪತ್ರ ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದ್ದು, ನಿ ಪಿ 5 ರಿಂದ 7 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು. ದಿನಾಂಕ: 10-09-2020 ರಂದು ಆರೋಪಿತರು ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ರಾಯಚೂರು ಇವರಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ಸದರಿ ನಿರೀಕ್ಷಣಾ ಜಾಮೀನು ಆದೇಶಗಳನ್ನು ಕ್ರಮವಾಗಿ ನಿ ಪಿ 8 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಆರೋಪಿತರ ವಿರುದ್ದ ಸಾಕಷ್ಟು ದೋಷಾರೋಪಣೆಗಳು ಕಂಡು ಬಂದಿರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲು: ಆರೋಪಿತರ ಪರ ಶ್ರೀ ಪಿ ಟಿ ಎನ್ ವಕೀಲರಿಂದ:-**

1. ದಿನಾಂಕ: 25-08-2020 ರಂದು ಠಾಣಾಧಿಕಾರಿಗಳಾಗಿ ನಾನೇ ಕರ್ತವ್ಯದಲ್ಲಿದ್ದೇನು. ದೂರು ಕೊಡಲು ಚಾಸಾ-1 ತಹಶೀಲ್ದಾರರವರು ಒಬ್ಬರೆ ಬಂದಿದ್ದರು. ಸುಮಾರು 1 ಗಂಟೆಯವರೆಗೆ ಅವರು ಠಾಣೆಯಲ್ಲಿದ್ದರು. ಘಟನೆಯು ದಿನಾಂಕ: 24-08-2020 ರಂದು ಆಗಿದ್ದು, ದೂರನ್ನು ತಡವಾಗಿ 25-08-2020 ರಂದು ಸಲ್ಲಿಸಿದ್ದು ತಡವಾಗಿ ದೂರು ಕೊಟ್ಟ ಬಗ್ಗೆ ಕಾರಣಗಳಣಗಳನ್ನು ದೂರಿನಲ್ಲಿ ಮತ್ತು ಎಫ್ ಐ ಆರ್ ಕಾಲಂ ನಂಬರ್ 3(ಸಿ) ನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ದೂರು ದಾಖಲಿಸಿದ ಮರುದಿನ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಚಾಸಾ-5 ರವರು ಸ್ಪೀಕರ್ ಗಳನ್ನು ತಂದು ಹಾಜರುಪಡಿಸಿರುತ್ತಾರೆ. ಸ್ಪೀಕರ್ ಜಪ್ತಿ ಪಂಚನಾಮೆಯನ್ನು ಮಾಡಿರುವುದಿಲ್ಲ. ಘಟನಾ ಸ್ಥಳವನ್ನು ಚಾಸಾ-1 ರವರು ನನಗೆ ತೋರಿಸಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಛಾಯಾ ಚಿತ್ರವನ್ನು ತೆಗೆಸಿರುತ್ತಾರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಪಂಚನಾಮೆ ಮಾಡಲು ಸ್ಥಳಕ್ಕೆ ಹೋದಾಗ ಗಣೇಶ ಪೆಂಡಾಲ್ ಇತ್ತು. ಅದನ್ನು ಬಿಟ್ಟು ಮತ್ತೇನು ಇರಲಿಲ್ಲ. ಪಂಚನಾಮೆಯಲ್ಲಿ ಗಣೇಶ ವಿಗ್ರಹ ಪ್ರತಿಷ್ಠಾಪನೆ ಮಾಡಿರುವುದನ್ನು ತೋರಿಸಿರುತ್ತೇನೆ. ಪಂಚನಾಮೆ ಮಾಡುವ ಕಾಲಕ್ಕೆ ಗಣೇಶ ವಿಗ್ರಹ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾಪನೆ ಮಾಡಿದ ಜಾಗ ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ.

2. ಗುನ್ನೆ ಸ್ಥಳದ ಪಂಚನಾಮೆ ಪೂರ್ವಕ್ಕೆ ಖಾಲಿ ಜಾಗ ನಂತರ ಗಣೇಶ ವಿಗ್ರಹ ಪ್ರತಿಷ್ಠಾಪನೆ ಮಾಡಿದ ಶೆಡ್ ಇದೆ, ಪಶ್ಚಿಮಕ್ಕೆ ಜೆ ಪಿ ಸರ್ಕಲ್ ರಸ್ತೆ, ಉತ್ತರಕ್ಕೆ ಜೆ ಪಿ ಸರ್ಕ ಲ್ ಗೆ ಹೋಗುವ ರಸ್ತೆ, ದಕ್ಷಿಣಕ್ಕೆ ದೇವದುರ್ಗ ತಹಶೀಲ್ದಾರ ಕಚೇರಿಗೆ ಹೋಗುವ ರಸ್ತೆ ಇರುತ್ತದೆ. ಪೂರ್ವ ದಿಕ್ಕಿಗೆ ಇರುವ ಖಾಲಿ ಜಾಗ ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ದೂರು ಕೊಡುವ ಪೂರ್ವದಲ್ಲಿ ಚಾಸಾ-1 ರವರು ಗಣೇಶ ವಿಗ್ರಹ ಪ್ರತಿಷ್ಠಾಪನೆ ಮಾಡಿ ಸ್ಪೀಕರ್ ಹೆಚ್ಚಿದ ಬಗ್ಗೆ ನನಗೆ ಮಾಹಿತಿಯನ್ನು ಕೊಟ್ಟಿಲ್ಲ. ಸಾಕ್ಷಿದಾರರ

ಹೇಳಿಕೆಗಳನ್ನು ಪೋಲಿಸ್ ಠಾಣೆಯಲ್ಲಿ ಪಡೆದಿರುತ್ತೇನೆ. ಚಾಸಾ-2 ಮತ್ತು 3 ಪಂಚ ಸಾಕ್ಷಿದಾರರು ತಹಶೀಲ್ದಾರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಸಿಬ್ಬಂದಿಯಾಗಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರಾದ ಚಾಸಾ-7 ಮತ್ತು 8 ರವರು ತಹಶೀಲ್ದಾರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಸಿಬ್ಬಂದಿಯಾಗಿರುತ್ತಾರೆ ಎಂದರೆ ಸರಿ. ಗಣೇಶ ಪ್ರತಿಷ್ಠಾಪನೆ ಮಾಡಿದ ಜಾಗದ ಸುತ್ತ ಖಾಲಿ ಜಾಗ ಮತ್ತು ಮನೆಗಳು ಇರುತ್ತವೆ.

3. ಆರೋಪಿತರು ಚಾಸಾ-1 ರವರು ಕರ್ತವ್ಯಲೋಪ ಮಾಡಿದ್ದಾರೆಂದು ದೂರು ಕೊಟ್ಟಿರುವ ವಿಷಯ ನನಗೆ ಮಾಹಿತಿ ಇಲ್ಲ. ಇದೇ ಕಾರಣಕ್ಕಾಗಿ ಚಾಸಾ-1 ರವರು ಸಿಟ್ಟುಮಾಡಿಕೊಂಡು ಸುಳ್ಳು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ: 25-08-2020 ರಂದು ರಾತ್ರಿ 8-15 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ದೂರು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ದಿನಾಂಕ: 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ಗಂಟೆಯವರೆಗೆ ಗುನ್ನೆ ಸ್ಥಳದ ಪಂಚನಾಮೆ ಮಾಡಿದ್ದೀರಿ ಎಂದರೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಕರ್ತವ್ಯದ ಪ್ರಮಾಣ ಪಡೆದುಕೊಂಡಿದ್ದಿರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಿಬ್ಬಂದಿ ಚಾಸಾ-5 ರವರಿಂದ ಸ್ಪೀಕರ್ ವಶಪಡಿಸಿಕೊಂಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಪ್ರ.ದ.ನ್ಯಾ.ದಂ.ಗಳು, ದೇವದುರ್ಗ.